ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ : 14–09–2019**

**ಪತ್ರಿಕಾ ಪ್ರಕಟಣೆ**

ಬೆಂಗಳೂರು, ಸೆಪ್ಟೆಂಬರ್ 14 ( ಕರ್ನಾಟಕ ವಾರ್ತೆ )

ಎಐಸಿಸಿಟಿಯು (AICCTU) ಕಾರ್ಮಿಕ ಸಂಘಟನೆಯವರು ಗಾರ್ಮೆಂಟ್ ಕಾರ್ಮಿಕರಿಗೆ ವೇತನ ಪರಿಷ್ಕರಿಸುವ ಸಂಬಂಧ ನೀಡಿರುವ ಪತ್ರಿಕಾ ಹೇಳಿಕೆಗೆ ಕಾರ್ಮಿಕ ಇಲಾಖೆಯಿಂದ ಸ್ಪಷ್ಟೀಕರಣ

1) ಕಾರ್ಮಿಕ ಇಲಾಖೆಯಿಂದ "ಸ್ಪಿನ್ನಿಂಗ್ ಮಿಲ್ಸ್", ಟೆಕ್ಸ್‌ಟೈಲ್ (ಸಿಲ್ಕ್)" ಹಾಗೂ " ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು" ಈ ಮೂರು (3) ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಪರಿಷ್ಕರಿಸಿ ಅಂತಿಮ ಅಧಿಸೂಚನೆಗಳನ್ನು ಸರ್ಕಾರವು ದಿನಾಂಕ : 30–12–2017 ರಂದು ಹಾಗೂ "ದರ್ಜಿ" ಅನುಸೂಚಿತ ಉದ್ದಿಮೆಗೆ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿ ಕರಡು ಅಧಿಸೂಚನೆಯನ್ನು ಸರ್ಕಾರವು ದಿನಾಂಕ : 22–02–2018 ರಂದು ಹೊರಡಿಸಿರುತ್ತದೆ. ಈ ಅಧಿಸೂಚನೆಗಳನ್ನು ಸರ್ಕಾರವು ದಿನಾಂಕ : 22–03–2018 ರಂದು ಹಿಂಪಡೆದು ಕನಿಷ್ಠ ವೇತನ ಕಾಯ್ದೆ 1948 ರ ಕಲಂ 5(1) (ಎ) ರನ್ವಯ ತ್ರಿಪಕ್ಷೀಯ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿರುತ್ತದೆ.
2) ಸಂಘಟಿತ ವಲಯದ "ಸ್ಪಿನ್ನಿಂಗ್ ಮಿಲ್ಸ್", "ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಮಾಡುವುದು" "ದರ್ಜಿ" ಹಾಗೂ "ಟೆಕ್ಸ್‌ಟೈಲ್ಸ್" (ಸಿಲ್ಕ್) ಅನುಸೂಚಿತ ಉದ್ದಿಮೆಗಳನ್ನು ಪ್ರತಿನಿಧಿಸುವ ಕಾರ್ಮಿಕ ವರ್ಗಕ್ಕೆ ಸಮರ್ಕವಾಗಿ ಪ್ರಾತಿನಿಧಿತ್ವವನ್ನು ನೀಡದಿರುವ ಅಂಶವು ದಿನಾಂಕ : 23–04–2018 ರಂದು ನಡೆದ ತ್ರಿಪಕ್ಷೀಯ ಸಭೆಯಲ್ಲಿ ಹಾಗೂ ತದನಂತರ ದಿನಾಂಕ : 18–06–2018 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳ ಬಗ್ಗೆ ನಡೆದ ಸಭೆಯಲ್ಲಿಯೂ ಪ್ರಸ್ತಾಪಗೊಂಡ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯಮಂತ್ರಿಗಳ ಮೌಖಿಕ ನಿರ್ದೇಶದನ್ವಯ, ಸರ್ಕಾರವು ದಿನಾಂಕ : 13–08–2018 ರಂದು ತ್ರಿಪಕ್ಷೀಯ ಸಮಿತಿಯನ್ನು ಪುನರ್‌ರಚಿಸಿರುತ್ತದೆ.
3) ತ್ರಿಪಕ್ಷೀಯ ಸಮಿತಿಯು ದಿನಾಂಕ 23–04–2018, ದಿನಾಂಕ 07–09–2018, ದಿನಾಂಕ 12–10–2018, ದಿನಾಂಕ : 11–06–2019, ದಿನಾಂಕ : 25–07–2019 ದಿನಾಂಕ : 16–08–2019, ದಿನಾಂಕ : 29–08–2019 ಹಾಗೂ ದಿನಾಂಕ : 05–09–2019 ಗಳಂದು ಒಟ್ಟು ಎಂಟು (8) ತ್ರಿಪಕ್ಷೀಯ ಸಭೆಗಳನ್ನು ನಡೆಸಿ, ಈ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಪರಿಷ್ಕರಿಸುವ ಬಗ್ಗೆ ಚರ್ಚಿಸಿರುತ್ತದೆ.
4) ಗಾರ್ಮೆಂಟ್ಸ್ ಉದ್ದಿಮೆಯನ್ನು ಪ್ರತಿನಿಧಿಸುತ್ತಿರುವ ಸಮಿತಿ ಸದಸ್ಯರುಗಳು, ಈ ಉದ್ದಿಮೆಯು ಪ್ರಸಕ್ತದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ತಿಳಿಸಿ, ಹೆಚ್ಚಿನ ವೇತನ ಪರಿಷ್ಕರಣೆಯಿಂದ ಗಾರ್ಮೆಂಟ್ಸ್ ಉದ್ದಿಮೆಗಳು ಮುಚ್ಚುವ ಅಥವಾ ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಸಂಭವವಿರುತ್ತದೆಂದು ತಿಳಿಸಿದ ಹಿನ್ನೆಲೆಯಲ್ಲಿ ಹಾಗೂ ಕಾರ್ಮಿಕವರ್ಗದ ಪ್ರತಿನಿಧಿಗಳು ಸಹ ಕಾರ್ಮಿಕರಿಗೆ ಹೆಚ್ಚಿನ ವೇತನ ಪರಿಷ್ಕರಣೆ ಮಾಡಬೇಕೆಂದು ಆಗ್ರಹಿಸಿರುವ ಹಿನ್ನೆಲೆಯಲ್ಲಿ, ಈ ಉದ್ದಿಮೆಯ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ, ವಸ್ತುನಿಷ್ಠ ವರದಿಯನ್ನು ಪಡೆದುಕೊಳ್ಳಲು ದಿನಾಂಕ : 07–09–2018 ರಂದು ನಡೆದ ಸಭೆಯಲ್ಲಿ ನಿರ್ಣಯಿಸಿ, "Technical Services Organisation of Karnataka (TECSOK)" ಸಂಶೋಧನಾ ಸಂಸ್ಥೆಗೆ ಈ ಕುರಿತು ಅಧ್ಯಯನ ನಡೆಸಿ ವರದಿಯನ್ನು ಸಿದ್ದಪಡಿಸಬೇಕೆಂದು ತೀರ್ಮಾನಿಸಲಾಗಿತ್ತು.

5) ಈ ಹಂತದಲ್ಲಿ ದಿನಾಂಕ : 12-10-2018 ರಂದು ನಡೆದ ಸಮಿತಿಯ ಸಭೆಯಲ್ಲಿ 4 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಸರ್ಕಾರವು ಹೊರಡಿಸಿದ್ದ ಅಧಿಸೂಚನೆಗಳನ್ನು ಹಿಂಪಡೆದ ಕ್ರಮವನ್ನು ಪ್ರಶ್ನಿಸಿ, ಎಐಟಿಯು ಸಂಘಟನೆಯು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ: 18621/2018 ರಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ : 18-06-2018 ರಂದು ಮಧ್ಯಂತರ ಆದೇಶ ಹೊರಡಿಸಿ, "The respondent shall not precipitate the matter further, by holding any further meetings of the committee as proposed under the notification" ಎಂಬುದಾಗಿ ನಿರ್ದೇಶಿಸಿದ ಹಿನ್ನೆಲೆಯಲ್ಲಿ ಸಭೆಯನ್ನು ಗೌರವಾನ್ವಿತ ನ್ಯಾಯಾಲಯದ ಮುಂದಿನ ಆದೇಶ ನಿರೀಕ್ಷಿಸಿ ಮುಂದೂಡಲಾಗಿತ್ತು.
6) ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ : 29-03-2019 ರಂದು ರಿಟ್ ಅರ್ಜಿ ಸಂ : 8388/2017 ಹಾಗೂ ಸಂಬಂಧಿತ ಪ್ರಕರಣಗಳಲ್ಲಿ ಹೊರಡಿಸಿರುವ ಅಂತಿಮ ತೀರ್ಪಿನಲ್ಲಿ ಸದರಿ 4 ಅನುಸೂಚಿತ ಉದ್ದಿಮೆಗಳಿಗೆ ತ್ರಿಪಕ್ಷೀಯ ಸಮಿತಿ ಮುಖಾಂತರ ಕನಿಷ್ಠ ವೇತನ ದರಗಳನ್ನು 6 ತಿಂಗಳ ಕಾಲಾವಧಿಯಲ್ಲಿ ಪರಿಷ್ಕರಿಸುವಂತೆ ನಿರ್ದೇಶಿಸಿರುತ್ತದೆ.
7) ತದನಂತರ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ಸಭೆಯನ್ನು ಆಯೋಜಿಸಿರುವುದಿಲ್ಲ. ದಿನಾಂಕ : 11-06-2019 ರಂದು ತ್ರಿಪಕ್ಷೀಯ ಸಮಿತಿಯ ಸಭೆಯಲ್ಲಿ ಮಾಲೀಕ ವರ್ಗದ ಹಾಗೂ ಕಾರ್ಮಿಕ ವರ್ಗದ ಪ್ರತಿನಿಧಿಗಳಿಗೆ ವೇತನ ಪರಿಷ್ಕರಣೆ ಸಂಬಂಧ ಸಲಹೆ ಸೂಚನೆಗಳನ್ನು ನೀಡಿ, ದ್ವಿಪಕ್ಷೀಯವಾಗಿ ಚರ್ಚಿಸಿ ಒಮ್ಮತದ ನಿರ್ಣಯಕ್ಕೆ ಬರಲು ಸೂಚಿಸಲಾಗಿತ್ತು.
8) ದಿನಾಂಕ : 25-07-2019 ರಂದು ನಡೆದ ಸಭೆಯಲ್ಲಿ "Technical Services Organisation of Karnataka (TECSOK)" ಸಂಶೋಧನಾ ಸಂಸ್ಥೆಯವರು ಕೈಗಾರಿಕೆ ಹಾಗೂ ಕಾರ್ಮಿಕರ ಕುರಿತು ಅಧ್ಯಯನ ನಡೆಸಿ ಕನಿಷ್ಠ ವೇತನ ಪರಿಷ್ಕರಣೆಗೆ ಪೂರಕ ವರದಿಯನ್ನು ಸಲ್ಲಿಸಿರುತ್ತಾರೆ.
9) ತದನಂತರ ತ್ರಿಪಕ್ಷೀಯ ಸಮಿತಿಯು ದಿನಾಂಕ : 16-08-2019, ದಿನಾಂಕ : 29-08-2019 ಹಾಗೂ ದಿನಾಂಕ : 05-09-2019 ಗಳಂದು ಸಭೆಗಳನ್ನು ನಡೆಸಲಾಗಿದ್ದು, ವೇತನ ಪರಿಷ್ಕರಣೆ ಸಂಬಂಧ, ಹಲವಾರು ಸಭೆಗಳನ್ನು ನಡೆಸಲಾಗಿದ್ದರೂ, ಒಮ್ಮತದ ಅಭಿಪ್ರಾಯ ಸಭೆಯಲ್ಲಿ ಮೂಡದ ಕಾರಣ, ಸಮಿತಿಯಿಂದ ಅಂತಿಮ ವರದಿಯನ್ನು ದಿನಾಂಕ : 06-09-2019 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಕಾರ್ಮಿಕ ಇಲಾಖೆಯಿಂದ ಮೇಲ್ಕಂಡ ನಾಲ್ಕು ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸುವ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವಕವಾಗಿ ಯಾವುದೇ ಕಾಲ ವಿಳಂಬ ಆಗಿರುವುದಿಲ್ಲ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ್ದ ಮಧ್ಯಂತರ ಆದೇಶ ಹಾಗೂ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದ ಅವಧಿಯಲ್ಲಿ ತ್ರಿಪಕ್ಷೀಯ ಸಮಿತಿಯ ಸಭೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ತದನಂತರ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿನ ನಿರ್ದೇಶಗಳನ್ವಯ ಕಾಲಮಿತಿಯಲ್ಲಿ ಸರ್ಕಾರಕ್ಕೆ ಕನಿಷ್ಠ ವೇತನ ಪರಿಷ್ಕರಿಸುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ಪ್ರಕಟಣೆ ತಿಳಿಸಿದೆ.

**ಬೆಂಗಳೂರು, ಸೆಪ್ಟೆಂಬರ್ 14 ( ಕರ್ನಾಟಕ ವಾರ್ತೆ )**

ಕೃಷಿ ಮೇಳ – 2019 ರಲ್ಲಿ ತೆರೆಯಲಾಗುವ ಮಳಿಗೆಗಳಿಗೆ ಸಂಸ್ಥೆಗಳಿಗೆ ನೋಂದಣಿ ಆರಂಭ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕೃಷಿ ಮೇಳವನ್ನು 24 ರಿಂದ 27 ಅಕ್ಟೋಬರ್ 2019 ರಂದು ಆಯೋಜಿಸಿದೆ. ಈ ಕೃಷಿ ಮೇಳದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸರ್ಕಾರಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಅಭಿವೃದ್ಧಿ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾನಿಲಯಗಳು, ಹಣಕಾಸು ಸಂಸ್ಥೆಗಳು, ಬಿತ್ತನೆ ಬೀಜ ಸಂಸ್ಥೆಗಳು, ಕೃಷಿ ಉಪಕರಣ ತಯಾರಕರು, ಪಶು ಸಂಗೋಪನಾ ಸಂಸ್ಥೆಗಳು, ಕೃಷಿ ಪರಿಕರಗಳ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತಿತರೆ ಸರ್ಕಾರಿ, ಅರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಭಾಗವಹಿಸಲಿವೆ. ಆಸಕ್ತಿಯುಳ್ಳ ಸಂಸ್ಥೆಗಳು/ಉದ್ದಿಮೆದಾರರು, ಮಳಿಗೆಗಳನ್ನು 12ನೇ ಅಕ್ಟೋಬರ್ 2019 ರ ಒಳಗೆ ಕಾಯ್ದಿರಿಸಿಕೊಳ್ಳಬಹುದು. ಮೊದಲು ನೊಂದಾಯಿಸಿಕೊಂಡವರಿಗೆ ಆದ್ಯತೆಯನ್ನು ನೀಡಲಾಗುವುದು. ಈ ಕೃಷಿ ಮೇಳದಲ್ಲಿ ಸುಮಾರು 12.00 ಲಕ್ಷಕ್ಕಿಂತ ಅಧಿಕ ಸಂಖ್ಯೆಯ ರೈತಬಾಂಧವರು ಮತ್ತು ಕೃಷಿ ಆಸಕ್ತರು ಭಾಗವಹಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ ಡಾ॥ ವಿ. ಪಳನಿಮುತ್ತು, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೊಯ್ಲೋತ್ತರ ತಂತ್ರಜ್ಞಾನ, ಮೊ: 9945254640, ಡಾ॥ ಬಿ.ಎಲ್. ಚಿದಾನಂದ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಪ್ರಾಣಿಶಾಸ್ತ್ರ, ಮೊ: 9845188846, ಡಾ॥ ಜಿ.ಆನಂದ್ ಮನಗರ್, ಸಹಾಯಕ ಪ್ರಾಧ್ಯಾಪಕರು, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ಮೊ: 9972201347 ಮತ್ತು ಶ್ರೀಯುತ ಹೆಚ್.ಕೆ. ಪ್ರಕಾಶ್, ಹಿರಿಯ ಪ್ರಯೋಗಶಾಲಾ ಸಹಾಯಕರು ಮೊ: 9845920735 ಗೆ ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು, ಸೆಪ್ಟೆಂಬರ್ 14 ( ಕರ್ನಾಟಕ ವಾರ್ತೆ )

**ಮೇಯರ್, ಉಪಮೇಯರ್ ಸ್ಥಾನಗಳಿಗೆ ನಾಮನಿರ್ದೇಶನ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ ಚುನಾವಣೆ ನಡೆಸಲು ದಿನಾಂಕ : 27-09-2019 ರಂದು ಬೆಳಿಗ್ಗೆ 11.30 ಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ಪೌರ ಸಭಾಂಗಣದಲ್ಲಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆಯನ್ನು ಏರ್ಪಡಿಸಲಾಗಿದೆ. ಸದರಿ ದಿನದಂದು ಬೆಳಿಗ್ಗೆ 8.00 ಗಂಟೆಯಿಂದ 9.30 ಗಂಟೆಯವರೆಗೆ ನಾಮನಿರ್ದೇಶನಗಳ ಸ್ವೀಕಾರ ಕಾರ್ಯವು ಸಹ ಇರುತ್ತದೆ ಎಂದು ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

************

ಬೆಂಗಳೂರು, ಸೆಪ್ಟೆಂಬರ್ 14 ( ಕರ್ನಾಟಕ ವಾರ್ತೆ )

**ಜಿಎಸ್‌ಟಿ ಗ್ರಾಹಕರಿಗೆ ಆಧಾರ್ ಕಡ್ಡಾಯ: ಸುಶೀಲ್‌ಕುಮಾರ್ ಮೋದಿ**

ಬೆಂಗಳೂರು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿ ವ್ಯವಹರಿಸುವ ಎಲ್ಲಾ ಗ್ರಾಹಕರಿಗೆ ಆಧಾರ್ ಸಂಖ್ಯೆ ಕಡ್ಡಾಯಗೊಳಿಸಲಾಗಿದೆ. ಗ್ರಾಹಕರ ವ್ಯವಹಾರದ ಭೌತಿಕ ಪರಿಶೀಲನೆ ನಡೆದ ಪಕ್ಷದಲ್ಲಿ ಇದರ ವಿನಾಯಿತಿ ದೊರಕಲಿದೆ ಎಂದು ಬಿಹಾರದ ಉಪಮುಖ್ಯಮಂತ್ರಿ ಹಾಗೂ ಜಿಎಸ್‌ಟಿ ಮಂಡಳಿಯ ಮುಖ್ಯಸ್ಥರಾದ ಶ್ರೀ ಸುಶೀಲ್‌ಕುಮಾರ್ ಮೋದಿ ತಿಳಿಸಿದರು.

ಅವರು ಹಿಂದೂ ಖಾಸಗಿ ಹೋಟೇಲ್‌ನಲ್ಲಿ ಜಿಎಸ್‌ಟಿಯ ಬೆಳವಣಿಗೆಗಳ ಕುರಿತು ಸಭೆಯ ನಂತರ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈಗಾಗಲೇ ಜಿಎಸ್‌ಟಿಯಡಿ ನೋಂದಿತ ಗ್ರಾಹಕರಿಗೆ ಸಹ ಮುಂದಿನ ಹಂತದಲ್ಲಿ ಆಧಾರ್ ಕಡ್ಡಾಯಗೊಳಿಸಲಾಗುವುದು. ಗ್ರಾಹಕರು ಆನ್‌ಲೈನ್ ಮೂಲಕ ಜಿಎಸ್‌ಟಿ ಹಣದ ಮರುಪಾವತಿಯನ್ನು ಮಾಡುವುದಕ್ಕೆ ಇದೇ ಸೆಪ್ಟೆಂಬರ್ 24 ಕ್ಕೆ ಗಡುವು ನೀಡಲಾಗಿದೆ. ಇದೀಗ ಕೇಂದ್ರ ಅಥವಾ ರಾಜ್ಯ ಯಾವುದಾದರೂ ಒಂದಕ್ಕೆ ಮರುಪಾವತಿಯನ್ನು ಮಾಡಬಹುದು. ಸದ್ಯ ರೂ. 93,416 ಕೋಟಿ ಮರುಪಾವತಿಯಾಗಬೇಕಿದ್ದು, ಅದರಲ್ಲಿ ಶೇ 74 ರಷ್ಟು ಮಾತ್ರ ಪಾವತಿಯಾಗಿದೆ. ಉಳಿಕೆ ಹಣವನ್ನು ಸಹ ಗ್ರಾಹಕರು ಶೀಘ್ರವೇ ಪಾವತಿಸಬೇಕೆಂದು ವಿನಂತಿಸಿದರು.

ತೆರಿಗೆ ಪಾವತಿಗಾರರಿಗೆ ಹೊಸ ಆದಾಯ ನೀತಿಯನ್ನು ಜನವರಿ 2020 ಕ್ಕೆ ಜಾರಿಗೊಳಿಸಲಾಗುವುದು. ಗ್ರಾಹಕರು ವಾರ್ಷಿಕ ಆದಾಯ ತೆರಿಗೆ ಪಾವತಿಯನ್ನು ಇದೇ ನವೆಂಬರ್ 30 ರೊಳಗೆ ಸಲ್ಲಿಸಬಹುದು. ಒಟ್ಟು 64,17,000 ಗ್ರಾಹಕರು ವಾರ್ಷಿಕ ತೆರಿಗೆಯಡಿ ಇದ್ದು, ಅದರಲ್ಲಿ ಕೇವಲ 21,35,000 ಗ್ರಾಹಕರು ಅಂದರೆ ಶೇ 33 ರಷ್ಟು ಮಾತ್ರ ವಾರ್ಷಿಕ ಆದಾಯವನ್ನು ಸಲ್ಲಿಕೆ ಮಾಡಿದ್ದಾರೆ. ಮುಂದುವರೆದ ದಿನಗಳಲ್ಲಿ ಇದನ್ನು ಇನ್ನಷ್ಟು ಸರಳೀಕರಣಗೊಳಿಸಲಾಗುವುದೆಂದರು.

-2

ಈ ವರ್ಷದ ಜೂನ್, ಜುಲೈನಲ್ಲಿ ಯಾವ ಗ್ರಾಹಕರು ಆದಾಯವನ್ನು ನೋಂದಾಯಿಸಿರುವುದಿಲ್ಲವೋ ಅಂತವರ ಇ-ವೇ ಬಿಲ್‌ನ್ನು ರದ್ದುಗೊಳಿಸಲಾಗುವುದು. ಕರ್ನಾಟಕದಲ್ಲಿ 1,75,294 ಇ-ವೇ ಬಿಲ್ ಬಳಕೆದಾರರಲ್ಲಿ 35,033 ಗ್ರಾಹಕರು ಅನಧಿಕೃತವಾಗಿ ಬಿಲ್ ಬಳಸುತ್ತಿದ್ದು, ಅವುಗಳನ್ನು ಶೀಘ್ರದಲ್ಲಿ ರದ್ದುಗೊಳಿಸಲಾಗುವುದು. ಈ ಪ್ರಕ್ರಿಯೆಯನ್ನು ರಾಜ್ಯಾದದ್ಯಂತ ನಡೆಸಲಾಗುವುದು. 15ನೇ ಹಣಕಾಸು ಆಯೋಗದ ಸದಸ್ಯರು ಸಹ ಇನ್ನು ಮುಂದೆ ಜಿಎಸ್‌ಟಿ ಮಂಡಳಿಯ ಸಭೆಗಳಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ರಾಜ್ಯ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಒಡಿಶಾ ರಾಜ್ಯದ ಹಣಕಾಸು ಹಾಗೂ ಅಬಕಾರಿ ಸಚಿವ ನಿರಂಜನ್ ಪೂಜಾರಿ ಉಪಸ್ಥಿತರಿದ್ದರು.